# ಕರ್ನಾಟಕ ವಿಧಾನ ಪರಿಷತ್ತು

## 140ನೇ ಅಧಿವೇಶನ

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 254 (256) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 04-03-2020 |
| ಉತ್ತರಿಸುವ ಸಚಿವರು | : | ಮಾನ್ಯ ಉಪಮುಖ್ಯಮಂತ್ರಿಗಳು, (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ) |

<table>
<tr><th>ಕ್ರ.ಸಂ.</th><th>ಚುಕ್ಕೆ ರಹಿತ ಪ್ರಶ್ನೆ</th><th>ಉತ್ತರ</th></tr>
<tr><td>1</td><td>ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಕೆಶಿಪ್-3 ಯೋಜನೆಗೆ ಅವಶ್ಯವಿರುವ ಜಮೀನನ್ನು ಭೂ ಮಾಲೀಕರಿಂದ ಖರೀದಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ.</td><td>ಕೆಶಿಪ್-3ರ ಯೋಜನೆಯ ಮಾಗಡಿಯಿಂದ ಸೋಮವಾರ ಪೇಟೆವರೆಗೆ ರಾಜ್ಯ ಹೆದ್ದಾರಿ ರಸ್ತೆ ನಾಗಮಂಗಲ ತಾಲ್ಲೂಕಿನಲ್ಲಿ ಹಾದು ಹೋಗುತ್ತಿದ್ದು, ಒಟ್ಟು 613 ಸರ್ವೆ ನಂಬರ್ ಗಳಲ್ಲಿ 66.00 ಎಕರೆ ಖಾಸಗಿ ಜಮೀನು ಅವಶ್ಯವಿದೆ. ಈ ಪೈಕಿ 380 ಸರ್ವೆ ನಂಬರ್‌ಗಳಲ್ಲಿ ಒಟ್ಟು 31-04.25 ಎ-ಗು ಜಮೀನು ನೋಂದಣಿಯಾಗಿದ್ದು, ಉಳಿಕೆ 233 ಸರ್ವೆ ನಂಬರ್‌ಗಳಲ್ಲಿ ಒಟ್ಟು 24-35.75 ಎಕರೆ ನೋಂದಣಿಯಾಗಲು ಬಾಕಿ ಇದೆ. ಬಾಕಿ ಇರುವ ಪ್ರಕರಣಗಳು ತಾಲ್ಲೂಕು ಕಛೇರಿ, ಎ.ಡಿ.ಎಲ್.ಆರ್ ಕಛೇರಿಗಳಲ್ಲಿ ವಿವಿಧ ಹಂತಗಳಲ್ಲಿ ಬಾಕಿ ಇರುತ್ತದೆ.</td></tr>
<tr><td>2</td><td>ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯಲ್ಲಿ ಈ ಯೋಜನೆಗೆ ಎಷ್ಟು ಜಮೀನು ಖರೀದಿಯಾಗಿದೆ. ಪರಿಹಾರ ವಿತರಿಸಲಾಗಿದೆ. ಪರಿಹಾರ ಹಣಕ್ಕಾಗಿ ಮಧ್ಯವರ್ತಿಗಳು ಒತ್ತಡ ತರುತ್ತಿರಬಹುದೇ.</td><td>ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯಲ್ಲಿ ಈ ಕೆಳಕಂಡಂತೆ ಜಮೀನು ಖರೀದಿ ಆಗಬೇಕಾಗಿದ್ದು, ವಿವರ ಕೆಳಕಂಡಂತಿವೆ :
<table>
<tr><th>ಕ್ರ. ಸಂ.</th><th>ಗ್ರಾಮ</th><th>ಖರೀದಿಸಬೇಕಾದ ವಿಸ್ತೀರ್ಣ (ಎಕರೆ/ಗುಂಟೆ)</th><th>ಖರೀದಿಯಾಗಿರುವ ವಿಸ್ತೀರ್ಣ (ಎಕರೆ/ಗುಂಟೆ)</th></tr>
<tr><td>1.</td><td>ದೇವಲಾಪುರ</td><td>11-30.50</td><td>05-01.75</td></tr>
<tr><td>2.</td><td>ಕುಡುಗಬಾಳು</td><td>20-33.75</td><td>02-32.50</td></tr>
<tr><td>3.</td><td>ಶೆಟ್ಟಿಹಳ್ಳಿ</td><td>05-27.00</td><td>02-36.25</td></tr>
<tr><td>4.</td><td>ತಿಬ್ಬನಹಳ್ಳಿ</td><td>03-15.50</td><td>01-20.25</td></tr>
<tr><td>5.</td><td>ತಟ್ಟಹಳ್ಳಿ</td><td>07-09.00</td><td>01-02.00</td></tr>
<tr><td colspan="2">ಒಟ್ಟು</td><td>48-35.75</td><td>13-12.75</td></tr>
</table>
ಈ ಯೋಜನೆಗೆ <u>13-12.75 ಎಕರೆ/ಗುಂಟೆ</u> ಜಮೀನು ಖರೀದಿ ಆಗಿದ್ದು ಈ ಬಾಬ್ತು ರೂ.3.25 ಕೋಟಿಗಳನ್ನು ವಿತರಿಸಲಾಗಿದೆ. ಪರಿಹಾರ ಹಣಕ್ಕಾಗಿ ಮಧ್ಯವರ್ತಿಗಳು ಒತ್ತಡ ತಂದಿರುವುದು ಕಂಡುಬಂದಿರುವುದಿಲ್ಲ.</td></tr>
<tr><td>3</td><td>ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು, ದೇವಲಾಪುರ ಹೋಬಳಿ, ಕುಡುಗುಬಾಳು ಗ್ರಾಮದಲ್ಲಿ ಸ.ನಂ.24/ಸಿ ನಲ್ಲಿ 0-25.00 ಗುಂಟೆ ಜಮೀನಿನ ಮಾಲೀಕರಾದ ಬಡ ರೈತ ಮಹಿಳೆಯ 0-15.00 ಗುಂಟೆ ಜಮೀನು ಭೂಸ್ವಾಧೀನಕ್ಕೆ ಪರಿಹಾರ ಹಣವನ್ನು ವಿತರಿಸಲಾಗಿದೆಯೇ.</td><td>ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು, ದೇವಲಾಪುರ ಹೋಬಳಿ, ಕುಡುಗುಬಾಳು ಗ್ರಾಮದಲ್ಲಿ ಸ.ನಂ.24/ಸಿ ರ 0-25 ಗುಂಟೆ ಜಮೀನಿನ ಪೈಕಿ 0-15 ಗುಂಟೆ ಜಮೀನು ಸಂಬಂಧ ಭೂಸ್ವಾಧೀನ ಪರಿಹಾರ ಹಣ ಪಾವತಿಸಲು ಪ್ರಕರಣವು 11ಇ ನಕ್ಷೆ ಪಡೆಯಲು ಬಾಕಿ ಇದ್ದು ಶೀಘ್ರವಾಗಿ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.</td></tr>
</table>

| | | |
|---|---|---|
| 4 | ಈ ಮಧ್ಯೆ ಕೆಲವು ಮಧ್ಯವರ್ತಿಗಳು ಪರಿಹಾರ ಹಣಕ್ಕಾಗಿ ಈ ಮಹಿಳೆಗೆ ಮೋಸ ಮಾಡುವ ಸಲುವಾಗಿ ಸರ್ವೆ ನಂ.24/ಬಿಪಿ1 ಎಂದು ಖಾತೆ ತೆರೆಯಿಸಿ, ಪರಿಹಾರ ಹಣಕ್ಕಾಗಿ ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದರಲ್ಲಿ ಅಧಿಕಾರಿಗಳು ಶಾಮೀಲಾಗಿರುವರೇ: ಸ.ನಂ.24/ಬಿ ಯಾರ ಹೆಸರಿನಲ್ಲಿದೆ: ಎಷ್ಟು ವರ್ಷಗಳಿಂದಿದೆ: ಸ.ನಂ.24/ಬಿಪಿ1 ಎಂದು ಯಾರಿಂದ ಯಾರಿಗೆ ಖಾತೆ ವರ್ಗಾವಣೆ ಗೊಂಡಿದೆ. | • ಸದರಿ ಸ.ನಂ. ಪರಿಹಾರ ಹಣಕ್ಕಾಗಿ ಮಧ್ಯವರ್ತಿಗಳು ಪ್ರಯತ್ನಿಸಿರುವುದು ಕಂಡುಬಂದಿರುವುದಿಲ್ಲ.<br>• ಇದರಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು ಕಂಡುಬಂದಿರುವುದಿಲ್ಲ.<br>• ಸ.ನಂ. 24/ಬಿ ಆರ್.ಟಿ.ಸಿ. ಹಾಗೂ ಆಕಾರಬಂದ್ ಪರಿಶೀಲಿಸಲಾಗಿ 24/ಬಿ ಆರ್.ಟಿ.ಸಿ. ಇರುವುದಿಲ್ಲ.<br>• ಸ.ನಂ.24/ಬಿಪಿ1 0–25 ಗುಂಟೆ ನಂದಿನಿ ಕೋಂ ಚಿಕ್ಕಬೋರೇಗೌಡ ರವರಿಗೆ ಎಂ.ಆರ್:13/2000–01 ರಂತೆ ಮಂಜುಳ ಕೋಂ ವರದರಾಜು ರವರಿಂದ ಖಾತೆಯಾಗಿರುತ್ತದೆ. |

ಸಂಖ್ಯೆ:ಲೋಇ E-32 ಇಎಪಿ 2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪಮುಖ್ಯಮಂತ್ರಿಗಳು,
(ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)